ಭಾರತಕ್ಕಾಗಿ ಸಂಪಾದಿಸಿದ ಹಿರಿಮೆ ಅವನದು. ದೆಹಲಿಯ ದರ್ಬಾರಿನಲ್ಲಿ ರಾಜಕವಿಯಾಗುವ ಅವಕಾಶಕ್ಕಾಗಿ ಕಾದು ಕಾದು ಪ್ರಯತ್ನದಲ್ಲಿ ಸಫಲನಾದ. ಕಾವ್ಯವನ್ನೇ ಉಸಿರಾಗಿಸಿಕೊಂಡು ಕಾವ್ಯದೊಂದಿಗೆ ಬಾಳುತ್ತಿದ್ದವನನ್ನು ಕಾವ್ಯಕನ್ನಿಕೆ ಕೈ ಬಿಡಲಿಲ್ಲ. ಆಸ್ಥಾನದ ದಾರಿ ತೋರಿ ಒಳಬಿಟ್ಟಳು. ಕಾವ್ಯಸಮ್ಮೇಳನ, ಕವಿಗೋಷ್ಠಿಗಳಲ್ಲಿ ಗಾಲಿಬನದೇ ಮೇಲುಗೈ. ಆಶ್ರಯವಿತ್ತ ಅರಸನ ಮೇಲೆ ಕಸೀದನ್ನು ಬರೆದು ಕುಣಿಸಿದ. ತನ್ನ ಮುಂದೆಯೇ ಪಲ್ಲಕ್ಕಿಯ ಮೇಲೆ ಮೆರೆದವರನ್ನು ಕಾವ್ಯಕುಂಚದಿಂದಲೇ ಕುಟುಕಿದ. ಒಳಗೊಳಗೆ ಪಿತೂರಿ ನಡೆಸುತ್ತಿದ್ದವರನ್ನು ವಿಡಂಬಿಸಿ ಹೆಡೆಮುರಿ ಕಟ್ಟಿದ. ತನ್ನ ಪಿಂಚಣಿ ಹಣಕ್ಕಾಗಿ ಕಾಡಿಸಿದವರನ್ನು ಕಸೀದ್‌ಗಳಲ್ಲಿಯೇ ಬಂಧಿಸಿ ಮೆರೆಸಿ ಒಲಿಸಿಕೊಂಡ. ಮೌಢ್ಯತೆ, ಧಾರ್ಮಿಕ ಮೂಢನಂಬಿಕೆ, ಬೂಟಾಟಿಕೆಗಳನ್ನು ಖಂಡಾತುಂಡವಾಗಿ ವಿರೋಧಿಸಿ ಭಾವೈಕ್ಯತೆ, ವೈಚಾರಿಕತೆ ಮೂಲಕ ಜನ ಕಲ್ಯಾಣದ ಪಣ ತೊಟ್ಟುಕೊಂಡ. ತನ್ನ ಕಾವ್ಯದಲ್ಲಿ ದೋಷಗಳಿವೆ ಎಂದು ಆರೋಪಿಸಿದವರಿಗೆ ಗಜಲ್‌ಗಳ ಮೂಲಕವೇ ತಿರುಗೇಟು ಕೊಟ್ಟ.

ಕನ್ನಡದ ಕವಿವರೇಣ್ಯರು ಪಂಡಿತರ ಭಾಷೆಯಾದ ಹಳಗನ್ನಡವನ್ನು ತ್ಯಜಿಸಿ ಸಾಮಾನ್ಯರ ಸವಿಗನ್ನಡಕ್ಕೆ ಒತ್ತುನೀಡಿದಂತೆ, ಗಾಲಿಬನೂ ಪಂಡಿತರ ಪರ್ಷಿಯನ್ ಬಿಟ್ಟು ಸಾಮಾನ್ಯರ ಉರ್ದುವಿನಲ್ಲಿ ಕಾವ್ಯಝರಿ ಹರಿಸಿ ಉಭಯಭಾಷಾವಿಶಾರದನಾದ. ಜಾತಿ, ಮತ, ಪಂಥಗಳಾಚೆಯೂ ಬಹು ಜನರಿಗೆ ಹತ್ತಿರವಾದ.

ಕಟ್ಟಿಕೊಂಡ ಸತಿ ಉಮ್ರಾವ್ ಬೇಗಂ ನಿತ್ಯ ಕರೆಗೊಡುವ ಐದೂ ಆಜಾನ್‌ಗಳಿಗೆ ತಪ್ಪದೇ ಪ್ರಾರ್ಥನೆ ಸಲ್ಲಿಸುವ ಪರಮ ದೈವ ಭಕ್ತೆ. ಆದರೆ ಗಾಲಿಬ್ ಮಸೀದಿಯ ಕಡೆಗೇ ಮುಖ ಮಾಡದ ಅಪ್ಪಟ ಕಾವ್ಯಧರ್ಮಿ. ಸಂಸಾರದ ಅಂತರಂಗದಲ್ಲಿ ದಾರಿ ಹೀಗೆ ಕವಲೊಡೆದಾಗ ಆಸರೆಯಾಗಿದ್ದು ಆತ ನಂಬಿದ ಕಾವ್ಯರಾಣಿಯೇ. ಜನಿಸಿದ ಏಳು ಮಕ್ಕಳೂ ನಕ್ಷತ್ರಗಳಂತೆ ಕಣ್ಣೆದುರೇ ಉದುರಿಬಿದ್ದಾಗ ವಿಹ್ವಲನಾದ. ಕಣ್ಣೆದುರಿನ ಮಗುವಿನ ಕೆನ್ನೆ ಸವರಿದಾಗ ಸಿಗುವ ಸ್ವರ್ಗಾನಂದ ಯಾವ ಕಾವ್ಯಾನಂದಕ್ಕಿಂತ ಕಡಿಮೆ ಹೇಳಿ? ಆ ಭಾಗ್ಯ ದಕ್ಕದಿದ್ದಾಗ ತನ್ನದೇ ಅಂತರಂಗದ ಕುಡಿಯಂತಿದ್ದ ಕಾವ್ಯವನ್ನೇ ಗಾಲಿಬ್ ತಿರಸ್ಕರಿಸಲಾರಂಭಿಸಿದ. ಆದರೆ ಕಾವ್ಯವನ್ನು ಬಿಟ್ಟ ಗಾಲಿಬ್‌ನನ್ನು ಕಲ್ಪಿಸಿಕೊಳ್ಳುವುದಾದರೂ ಹೇಗೆ? ಮೊಮ್ಮಕ್ಕಳ ಮುಖ ನೋಡಿ ಮತ್ತೆ ಲಯಕ್ಕೆ ಹಿಂತಿರುಗಿದ. ಇದು ಅವನಲ್ಲಿದ್ದ ಜೀವನಪ್ರೀತಿಯ ವಿರಾಟ ರೂಪದ ವಿಲಾಸದ ಕೈಲಾಸ. ಅರಮನೆಯ ಪಲ್ಲಕ್ಕಿಯ ಮೇಲೆ ಕುಳಿತುಕೊಂಡು ರಾಜಾಶ್ರಯ ಪಡೆದು ಆಸ್ಥಾನಕವಿಯಾಗಬೇಕೆಂಬ ಹಂಬಲ ಎಲ್ಲ ಕವಿಗಳಲ್ಲಿದ್ದಂತೆ ಆತನಲ್ಲಿಯೂ ಸಹಜವಾಗಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಕಂಡ ಕನಸನ್ನು ನನಸಾಗಿಸಿಕೊಳ್ಳಲು ಇನ್ನಿಲ್ಲದಂತೆ ಹೆಣಗಾಡಿದ. ದೆಹಲಿಯ ಸಾಮ್ರಾಜ್ಯಶಾಹಿ ಸಂಘರ್ಷದ ಚರಿತ್ರೆ ಹಾಗೂ ತನ್ನದೇ ಡೋಲಾಯಮಾನ ಬದುಕಿನ ರೂಪಕದಂತಿರುವ ಕವಿತೆಯೊಂದನ್ನು ಗಾಲಿಬ್ ಹಾಡಿರುವುದು ಹೀಗೆ:

ಓಡುತಿದೆ ಆಯುಷ್ಯದ ಅಶ್ವ: ಎಲ್ಲಿ ಹೋಗಿ ನಿಲ್ಲುವದೋ
ಕಡಿವಾಣ ಕೈಯೊಳಿಲ್ಲ, ಅಂಕವಣೆಯೊಳಿಲ್ಲ ಕಾಲು!

ಪೊಟ್ಟಣ ಕಟ್ಟುವ ಕಾಲಡಿಯ ಹಾಳೆಯಲ್ಲಿ ಸಿಕ್ಕ ಕಾವ್ಯದ ಸಾಲುಗಳನ್ನು ಆಕಸ್ಮಾತಾಗಿ ಗುಣುಗುಣಿಸಿ ಹಾಡಿದವಳ ದನಿಯನ್ನು ಕೇಳಿದ ಗಾಲಿಬನಿಗೆ ಹಾರಿಹೋಗುತ್ತಿದ್ದ ಹೃದಯದ ಹಕ್ಕಿ ಮರಳಿ ಎದೆಗೂಡಿಗೆ ಇಳಿದಂತಾಯಿತು; ದೆಹಲಿಗೆ ಬೇಡವಾದ ತನ್ನ ಕಾವ್ಯದಿಂದ ವಿಚಲಿತನಾಗಿದ್ದವನಿಗೆ ಮರುಭೂಮಿಯಲ್ಲಿ ಓಯಸಿಸ್ ದೊರಕಿದ ಸಂಭ್ರಮ; ಬತ್ತಿ ಹೋಗುತ್ತಿದ್ದ ಅವನೆದೆಯ ಚೈತನ್ಯದ ಚಿಲುಮೆ ಮತ್ತೆ ಪುಟಿದಂತಾಯಿತು; ಮೋಡಗಳ ಹಿಂದೆ ಮರೆಯಾಗಿ ಕತ್ತಲೆಯಲ್ಲಿ ಬೆಳದಿಂಗಳನ್ನು ಕಳೆದುಕೊಂಡ ಚಂದಿರ ಮತ್ತೆ ತೆರೆ ಸರಿಸಿಕೊಂಡು ಬೆಳಗಿದಂತಾಯಿತು. ಬಾಡಿ ಹೋಗುತ್ತಿದ್ದ ಬಳ್ಳಿಗೆ ಜೀವಜಲದ ಹನಿಗಳೆರೆದಂತಾಯಿತು; ಬರಗಾಲದಿಂದ ಬಿರುಕೊಡೆದು ದೆಸೆ ದೆಸೆಗೆ ಬಾಯಿಬಿಡುತ್ತಿದ್ದ ಇಳೆಗೆ ಇಬ್ಬನಿಯ ಸವಿಜೇನು ದಕ್ಕಿದಂತಾಗಿತ್ತು. ಕಾವ್ಯಾಲಾಪದಂತೆ ಗಾಲಿಬ್‌ನ ಹೃದಯದೊಂದಿಗೆ ಹೀಗೆ ಹಾಡುತ್ತಲೇ ಜೊತೆಯಾದವಳು ದೆಹಲಿಯ ನರ್ತಕಿ ನವಾಬ್ ಜಾನ್. ಗಾಲಿಬ್‌ನ ಕಾವ್ಯದೆಡೆಗಿನ ಅವಳ ವ್ಯಾಮೋಹ ಎಂತಹುದೆಂದರೆ, ಆಕೆ ತನ್ನ ಮನ–ಮನೆಗಳನ್ನೆಲ್ಲವನ್ನೂ ಅಲಂಕರಿಸಿಕೊಂಡಿದ್ದು ಗಾಲಿಬ್‌ನನ್ನು ಕಾಡುವ ಶೇರ್ (ದ್ವಿಪದಿ) ಮಣಿಗಳಿಂದಲೇ. ಆಕೆ ತನ್ನ ಹೆಸರಿಗೆ ತಕ್ಕಂತೆ ಗಾಲಿಬನ ಕಾವ್ಯಾತ್ಮವೇ ಆಗಿಬಿಟ್ಟಳು ಎನ್ನುವುದಕ್ಕೆ ಕೆಳಗಿನ ಸಾಲುಗಳನ್ನು ಗಮನಿಸಿ:



ಗಾಲಿಬ್ ಬಳಸಿದ ವಸ್ತುಗಳು

ಜಾನ್ ತುಮ್ ಪರ್ ನಿಸಾರ್ ಕರ್ ತಾ ಹೂ
ಮೈ ನಹಿ ಜಾನ್ ತಾ ದುವಾ ಕ್ಯಾ ಹೈ?
(ನೀನೆಂದರೆ ಜೀವ ಬಿಡುತ್ತೇನೆ, ಅದರ ಹೊರತಾಗಿ ಇನ್ಯಾವ ಪ್ರಾರ್ಥನೆಯೂ ನನಗೆ ಗೊತ್ತಿಲ್ಲ).

ಗಾಲಿಬನ ಸ್ನೇಹದಿಂದಾಗಿಯೇ ಸಮಾಧಿಯಾದ ನವಾಬ್ ಜಾನ್‌ಳ ಗೋರಿಯ ಮೇಲೆ ಬರೆದ ಗಾಲಿಬನ ಸಾಲುಗಳಿವು:

ಯೆ ನ ಥಿ ಹಮಾರಿ ಕಿಸ್ಮತ್ ಕೆ ಮಿಸಾಲ್ ಎ ಯಾರ್ ಹೋತಾ
ಅಗರ್ ಔರ್ ಜೀತೆ ರೆಹ್ತೆ ಯಹಿ ಇಂತಜಾರ್ ಹೋತಾ
(ಪ್ರೇಮಿಯನ್ನು ಸಂಧಿಸುವುದು ನನ್ನ ಹಣೆಯಲ್ಲಿ ಬರೆದಿಲ್ಲ
ಇನ್ನು ಬದುಕಿದ್ದರೂ ಇದೇ ನಿರೀಕ್ಷೆಯಲ್ಲೇ ಬದುಕಬೇಕಿತ್ತು)

ಇದಲ್ಲವೇ ಎರಡು ದೇಹ ಒಂದೇ ಆತ್ಮದಂತಿದ್ದವರ ನಿರ್ಮಲ ಕಾವ್ಯಾನುರಾಗದ ಹೊಳೆಯ ಹರಿವು. 1797ರಿಂದ 1869ರವರೆಗೆ 72 ವರ್ಷಗಳ ಜೀವನವನ್ನು ಸವೆಸಿದ ಗಾಲಿಬ್ ಸಮಾಧಿಯಾಗಿ ಒಂದೂವರೆ ಶತಮಾನಗಳೇ ಕಳೆದಿವೆ. ಆದರೂ ಆತ ವರ್ತಮಾನದ ಲೇಖಕರನ್ನು ಮತ್ತು ಓದುಗರನ್ನು ಜ್ವರದಂತೆ ಕಾಡುತ್ತಲೇ ಇದ್ದಾನೆ.

ಗಾಲಿಬನ ಕುರಿತು ತಮ್ಮ ಪ್ರಪ್ರಥಮ ಅನುವಾದ ಕೃತಿಯನ್ನು ಹೊರತಂದಿರುವ ಇಮಾಮ್ ಸಾಹೇಬ ಹಡಗಲಿಯವರು –

ಗಾಲಿಬ ಜೀವನದುದ್ದಕ್ಕೂ ಕನ್ನಡಿ ಒರೆಸುತ್ತಿದ್ದ
ಈಗ ನಾನು ಅವನ ಮುಖ ಒರೆಸುತ್ತಿದ್ದೇನೆ
ಅವನ ಸಮಾಧಿಯ ಮೇಲಿನ ಧೂಳನ್ನೂ ಕೂಡ
ಇನ್ನು ನೀವುಂಟು, ಗಾಲೀಬನುಂಟು

ಹೀಗೆ ಗಾಲಿಬನನ್ನು ಕಾವ್ಯಪ್ರೇಮಿಗಳ ಹೃದಯದೊಳಗಿಳಿಸುತ್ತಾರೆ.

ಕವಿತಾವಿಲಾಸದ ಕಾವಿನಿಂದ ಹಾಡುತ್ತಲಿದ್ದೇನೆ;
ನಾನಿಹೆನು ಬರಲಿರುವ ಬನದ ಬುಲ್‌ಬುಲ್!

ಯುಗಾದಿಯ ಕೆಂದಳಿರನ್ನುಂಡ ಕೋಗಿಲೆಯೊಂದು ಹರ್ಷೋಲ್ಲಾಸದಲ್ಲಿ ಹಾಡಿದ ಗೀತೆಯಂತಿದೆ ಗಾಲಿಬನ ಮೇಲಿನ ಕವಿತೆ. ಧರ್ಮ, ಭಕ್ತಿ, ಆಚರಣೆಗಳೆಂದರೆ ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತಿದ್ದ ಗಾಲಿಬ್ ಭಕ್ತಿಯ ವ್ಯಾಖ್ಯಾನ ವಿಭಿನ್ನ ನೆಲೆಯದ್ದು. ಆಸೆ ಅಮಿಷ ಬಯಕೆಗಳಿಂದ ತುಂಬಿದ ಸ್ವಾರ್ಥ ಭಕ್ತಿಯನ್ನು ಗಾಲಿಬ್ ವಿಡಂಬಿಸುವುದು ಹೀಗೆ:

ಭಕ್ತಿಯೊಳಗಿರದಿರಲಿ ಮಧು ಸುಧೆಯ ಆಸೆಯು
ನರಕದೊಳಗೊಗೆಯಿರಿ ಸ್ವರ್ಗವನ್ನಾದರೂ!

ಈ ದ್ವಿಪದಿಯನ್ನು ಕೇಳುತ್ತಿದ್ದರೆ ವಚನಕಾರರು ಶರಣ, ಭಕ್ತ–ಭಕ್ತಿಯನ್ನು ಕುರಿತು ಹಾಡಿದ ವಚನಗಳು ನೆನಪಾಗುತ್ತವೆ.